# ಕನ್ನಡ ನಾಡು–ನುಡಿ–ಜಲದ ಅಸ್ಮಿತೆ

**ಪ್ರವೀಣ್ ಕುಮಾರ್ ಎಸ್.**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸಮಾಜ ವಿಜ್ಞಾನ ಮತ್ತು ಮಾನವಿಕ ಶಿಕ್ಷಣ ವಿಭಾಗ
ಪ್ರಾದೇಶಿಕ ಶಿಕ್ಷಣ ಸಂಸ್ಥೆ, ಎನ್.ಸಿ.ಇ.ಆರ್.ಟಿ.,
ಮೈಸೂರು.

**Article Link: https://aksharasurya.com/2024/02/praveen-kumar-s-2.php**

## ABSTRACT:

ಕನ್ನಡ ನಾಡು ನುಡಿ ಮತ್ತು ಸಂಸ್ಕೃತಿಯ ಬಗೆಗೆ ಇಂದು ಪ್ರತಿಯೊಬ್ಬರು ಆಲೋಚಿಸಬೇಕಿದೆ. ಕನ್ನಡ ಸಾಹಿತ್ಯದ ಕವಿಗಳಾದ ಶ್ರೀ ವಿಜಯ, ಪಂಪ, ಆಂಡಯ್ಯ, ನಯಸೇನ ಹಾಗೂ ಹೊಸಗನ್ನಡದ ಸಂದರ್ಭದ ಕವಿಗಳಾದ ಬಿ.ಎಂ.ಶ್ರೀ., ತೀ.ನಂ.ಶ್ರೀ., ಆನಂದಕಂದ, ಕುವೆಂಪು, ವಿ.ಸೀತಾರಾಮಯ್ಯ ಮೊದಲಾದವರು ನಾಡಿನ ಕುರಿತಾಗಿ ನುಡಿಯ ಕುರಿತಾಗಿ ಅಭಿಮಾನವನ್ನು ಹಾಗೂ ಕನ್ನಡದ ಸ್ಥಿತಿಯನ್ನು ಕುರಿತು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ನಾಡಿನ ಏಕೀಕರಣ, ಭಾಷಾ ವರ್ಗೀಕರಣ, ಪ್ರಾಂತ್ಯ ವಿಭಜನೆ, ಕನ್ನಡಿಗರಲ್ಲಿನ ಒಗ್ಗಟ್ಟಿನ ಕೊರತೆ ಮೊದಲಾದವುಗಳ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿ ಕನ್ನಡದ ಅಸ್ತಿತ್ವಕ್ಕಾಗಿ ಶ್ರಮಿಸುವಂತೆ ಕನ್ನಡಿಗರನ್ನು ಎಚ್ಚರಿಸುತ್ತಾರೆ.

## KEY WORDS:

ಅಸ್ಮಿತೆ, ಏಕೀಕರಣ, ಉಪಭಾಷೆ, ಪ್ರಾದೇಶಿಕ ಭಾಷೆ, ಅಭಿವ್ಯಕ್ತಿ, ಆತಂಕ.

ಜಗತ್ತಿನ ನಾಗಾಲೋಟದೊಂದಿಗೆ ನಮ್ಮೆಲ್ಲರ ಭಾಷೆ, ಸಂಸ್ಕೃತಿ, ಬದುಕಿನಲ್ಲೂ ಅಗಾಧವಾದ ಮಾರ್ಪಾಡುಗಳಾಗುತ್ತಿವೆ. ಅಂತಾರಾಷ್ಟ್ರೀಯ, ರಾಷ್ಟ್ರೀಯ ಭಾಷೆಗಳ ಹೆಸರಿನಲ್ಲಿ ಕೆಲವೇ ಭಾಷೆಗಳು ವಿಜೃಂಭಿಸುತ್ತಿವೆ. ದಿನದಿನಕ್ಕೂ ಕನ್ನಡ ಮಾಧ್ಯಮ ಶಾಲೆಗಳ ಪ್ರವೇಶಾತಿ ಪ್ರಮಾಣ ಕನ್ನಡದ ಪ್ರಸ್ತುತ ಸ್ಥಿತಿಯನ್ನು ತೋರಿಸುತ್ತಿದೆ. ಕನ್ನಡ ನಾಡಿನಲ್ಲಿ ಕನ್ನಡದ ನಾಮ ಫಲಕಗಳನ್ನು ಹಾಕುವುದಕ್ಕೆ ಕನ್ನಡಿಗರು ಬೀದಿಗೆ ಇಳಿಯಬೇಕಾದ ಪರಿಸ್ಥಿತಿ ಆರಂಭವಾಗಿದೆ. ಬೆಂಗಳೂರಿನ ಕೆಲವು ನಗರಗಳು ಅಕ್ಷರಷಃ ಇದು ಕನ್ನಡ ನಾಡು ಹೌದೇ? ಎಂಬಂತೆ ಅಚ್ಚರಿ ಮೂಡಿಸುತ್ತಿವೆ. ಬೆಂಗಳೂರಿಗೆ ವಲಸೆ ಬರುವ ಹಲವರು ಕನ್ನಡ ಕಲಿಕೆಯಲ್ಲಿ ಆಸಕ್ತಿ ತೋರುತ್ತಿಲ್ಲ. ಕನ್ನಡಿಗರು ಹಲವು ಭಾಷೆಗಳನ್ನು ಕಲಿತು ಪರಭಾಷಿಗರೊಂದಿಗೆ ಅವರ ಭಾಷೆಯಲ್ಲಿ

ಮಾತನಾಡುತ್ತಾರೆ ಬದಲಿಗೆ ಅವರಿಗೆ ಕನ್ನಡ ಕಲಿಸುವ ಪ್ರಯತ್ನ ಮಾಡುತ್ತಿಲ್ಲ.

ಕರ್ನಾಟಕದ ಏಕೀಕರಣದ ಹೆಸರಿನಲ್ಲಿ ಕನ್ನಡ ನಾಡಿನ ಪ್ರಮುಖ ಪ್ರದೇಶಗಳು ಇತರ ರಾಜ್ಯಗಳ ಪಾಲಾಗಿವೆ. ಕನ್ನಡಿಗರು ಇಂದು ಗಡಿನಾಡ ಕನ್ನಡಿಗರು, ಹೊರನಾಡ ಕನ್ನಡಿಗರು ಎಂಬ ಹೆಸರುಗಳಿಂದ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವಂತಾಗಿದೆ.

ಪ್ರತಿ ಬಾರಿ ಕಾವೇರಿ, ಕೃಷ್ಣ, ಮಹಾದಾಯಿ ನದಿ ನೀರಿಗಾಗಿ ಇತರ ರಾಜ್ಯಗಳೊಂದಿಗೆ ಹೋರಾಡುವ ಪರಿಸ್ಥಿತಿ ಶೋಚನೀಯ. ಇಂಥ ಹತ್ತು ಹಲವು ಸಮಸ್ಯೆಗಳ ನಡುವೆ ನಾವು ಕನ್ನಡ ಕಾವ್ಯ ಲೋಕ ಅನಾವರಣಗೊಳಿಸಿದ ಕನ್ನಡದ ಬಗೆಗಿನ ವಿಚಾರಗಳನ್ನು ಸ್ಮರಿಸಿಕೊಳ್ಳೋಣ.

ಕನ್ನಡ ಭಾಷೆ, ಸಂಸ್ಕೃತಿ, ಪ್ರದೇಶ, ನದಿ, ಜನ–ಮನ ಈ ಎಲ್ಲವುಗಳ ಬಗ್ಗೆಯು ಕನ್ನಡ ಕವಿತೆಗಳು ಚರ್ಚಿಸಿವೆ, ಆಲೋಚಿಸಿವೆ. ಶಾಸನಗಳು, ಮಹಾಕಾವ್ಯಗಳು, ರಾಜ ಸಂಸ್ಥಾನಗಳು, ಕವಿ–ಲೇಖಕರು ಕನ್ನಡ ನಾಡಿನ ಸಂಮೃದ್ಧವಾದ ವರ್ಣನೆ ಮಾಡಿದ್ದಾರೆ.

ಕ್ರಿ.ಶ. 814 ರಲ್ಲಿ ಶ್ರೀ ವಿಜಯ ಬರೆದ 'ಕವಿರಾಜಮಾರ್ಗ' ದಲ್ಲಿನ

**ಕಾವೇರಿಯಿಂದಮಾ ಗೋ**
**ದಾವರಿವರಮಿರ್ದ ನಾಡದಾ ಕನ್ನಡದೊಳ್**
**ಭಾವಿಸಿದ ಜನಪದಂ**

**(ಶ್ರೀ ವಿಜಯ, ಕವಿರಾಜಮಾರ್ಗ)**

ಈ ಸಾಲುಗಳು ಕನ್ನಡ ನಾಡಿನ ವಿಸ್ತಾರವನ್ನು ತಿಳಿಸುತ್ತದೆ. ಅಂದಿನ ದಿನಗಳಲ್ಲಿ ಭಾಷೆಗಳ ಆಧಾರದ ಮೇಲೆ ಪ್ರದೇಶಗಳ ವಿಂಗಡಣೆ ಆಗಿರಲಿಲ್ಲ.

ಕ್ರಿ.ಶ. 941 ರಲ್ಲಿ ಮಹಾಕವಿ ಪಂಪ ಬರೆದ 'ವಿಕ್ರಮಾರ್ಜುನ ವಿಜಯ' ಹಾಗೂ 'ಆದಿಪುರಾಣ' ಕಾವ್ಯಗಳಲ್ಲಿ ತಾನು ಹುಟ್ಟಿ ಬೆಳೆದ ಕನ್ನಡ ನಾಡಿನ ಅದ್ಭುತವಾದ ವಿವರಣೆಯನ್ನು ನೀಡುತ್ತಾನೆ. ಮನದಣಿಯೇ ಮೆಚ್ಚುತ್ತಾನೆ.

**'ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್'**

**(ಪಂಪ, ವಿಕ್ರಮಾರ್ಜುನ ವಿಜಯ)**

ಎಂಬ ಮಾತು ಮುಖ್ಯವಾದುದು. ಇಂದು ಬೆಂಗಳೂರನ್ನು ಉದ್ಯಾನ ನಗರಿ ಎನ್ನಲಾಗುತ್ತದೆ. ಆದರೆ, 10ನೇ ಶತನಮಾನದಲ್ಲಿಯೇ ಪಂಪ ಮಹಾಕವಿ ಕನ್ನಡದ ಬನವಾಸಿ ಪ್ರಾಂತ್ಯವನ್ನು ನಂದನವನ ಎನ್ನುವುದು ಎಷ್ಟು ಅಶ್ಚರ್ಯವಲ್ಲವೆ.

ಕ್ರಿ.ಶ. 1235 ರ ಸಂದರ್ಭದಲ್ಲಿನ ಕನ್ನಡದ ಹೆಮ್ಮೆಯ ಕವಿ 'ಆಂಡಯ್ಯ' ತನ್ನ 'ಕಬ್ಬಿಗರ ಕಾವ' ಎಂಬ ಕಾವ್ಯವನ್ನು ತತ್ಸಮದ ಬದಲಿಗೆ ತದ್ಭವಗಳ ರೂಪದಲ್ಲಿ ಬರೆಯುವ ಪ್ರಯತ್ನ ಮಾಡಿ ತನ್ನ ಕನ್ನಡದ ಪ್ರೀತಿಯನ್ನು ಮೆರೆದಿದ್ದಾನೆ. 'ಕನ್ನಡ ಮೆನಿಪ್ಪಾ ನಾಡು ಚೆಲ್ವಾಯ್ತು' ಎಂಬ ಆತನ ಕನ್ನಡ ಪ್ರೀತಿ ಪ್ರಮುಖವಾದುದು. ಕ್ರಿ.ಶ. 1584 ರಲ್ಲಿನ ವಿರೂಪಾಕ್ಷ ಕವಿ ಬರೆದ 'ಚೆನ್ನಬಸವ ಪುರಾಣ' ದಲ್ಲಿ ಆತ ವರ್ಣಿಸುವ ನಾಡಿನ ಸೌಂದರ್ಯ ಕನ್ನಡ ನಾಡಿನದ್ದೇ ಆಗಿದೆ. ಸಂಮೃದ್ಧವಾದ ಬೆಳೆಗಳು, ಉತ್ತಮವಾದ ಮಳೆ, ತುಂಬಿರುವ ಕೆರೆಗಳು, ಗಿರಿ ಶಿಖರಗಳು, ಆನೆಗಳು, ಗಿಳಿ ಗೊರವಂಕಗಳು ಹೀಗೆ ಈ ಎಲ್ಲವುಗಳಿಂದ ಕನ್ನಡ ನಾಡು ಶ್ರೀಮಂತವಾಗಿತ್ತು ಎನ್ನುವ ಆತನ ಮಾತುಗಳು ಬಹುಮುಖ್ಯ.

ಕ್ರಿ.ಶ. 1112 ರಲ್ಲಿನ ಮಹತ್ವದ ಕವಿ 'ನಯಸೇನ' ತನ್ನ 'ಧರ್ಮಾಮೃತ' ದಲ್ಲಿ ಬರೆದ ಕನ್ನಡದ ಪ್ರೀತಿಯ ಸಾಲುಗಳು ಅಂದಿನ ಬಹುಭಾಷಾ ಪಂಡಿತರಿಗೆ ನೀಡಿದ ಬಹುದೊಡ್ಡ ಎಚ್ಚರಿಕೆಯಾಗಿತ್ತು. ತಾವು ಸಂಸ್ಕೃತವನ್ನು ಬರೆಯುವಿರಾದರೆ ಪೂರ್ಣವಾಗಿ ಸಂಸ್ಕೃತದಲ್ಲಿ ಬರೆಯಿರಿ. ಕನ್ನಡವನ್ನು ಬರೆಯಬೇಕೆಂದು ನಿರ್ಣಯಿಸಿದರೆ, ಕನ್ನಡದಲ್ಲಿ ಬರೆಯಿರಿ. ಆದರೆ, ಕನ್ನಡ ಮತ್ತು ಸಂಸ್ಕೃತ ಎರಡನ್ನು ಮಿಶ್ರಣ ಮಾಡಿ ಭಾಷೆಯ ಶ್ರೇಷ್ಠತೆಯನ್ನು ಹಾಳು ಮಾಡಬಾರದೆಂದು ಎಚ್ಚರಿಸುವ ಆತನ ಎದೆಗಾರಿಕೆಗೆ ನಾವು ತಲೆಬಾಗಬೇಕಿದೆ. ಇಂದಿನ ಸಂದರ್ಭದಲ್ಲಿ ಪರಭಾಷಾ ವ್ಯಾಮೋಹ ಸಂಸ್ಕೃತದಿಂದ ಇಂಗ್ಲಿಷ್ ಭಾಷೆ ಕಡೆಗೆ ತಿರುಗಿದೆ. ಕವಿ ಮಹಾಲಿಂಗ ರಂಗ ತನ್ನ 'ಅನುಭವಾಮೃತ' ಕೃತಿಯಲ್ಲಿ ಕನ್ನಡದ ಬಳಕೆಯನ್ನು ಹಿತವಾದ ಬಿಸಿಯುಳ್ಳ ಹಾಲಿನ ರುಚಿಯಂತೆ ಸೊಗಸು ಎನ್ನುತ್ತಾನೆ.

ಕವಿಗಳಾದ ಕುಮಾರವ್ಯಾಸ, ಲಕ್ಷ್ಮೀಶ, ಷಡಕ್ಷರಿ ಅವರ ನಾಡು ನುಡಿಯ ಪ್ರೇಮಕ್ಕೆ ಅವರ ಬರಹಗಳಲ್ಲಿ ಸ್ಪಷ್ಟವಾದ ಉಲ್ಲೇಖಗಳಿವೆ. ವಿಶ್ವ ಸಾಹಿತ್ಯಕ್ಕೆ ನಮ್ಮ ಕನ್ನಡದ ಕೊಡುಗೆ ಎಂದರೆ ಅದು 'ವಚನ ಸಾಹಿತ್ಯ'. ಪ್ರತಿಯೊಬ್ಬ ವಚನಕಾರರು ತಮ್ಮ ನಿಲುವುಗಳನ್ನು ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಸರಳವಾದ ಕನ್ನಡದಲ್ಲಿ ವಚನಗಳನ್ನು ರಚಿಸಿದ್ದಾರೆ.

ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಪ್ರಚುರವಾದ ಕನ್ನಡ ದನಿಗಳು ಕಾವ್ಯ ರೂಪದಲ್ಲಿ ಮೈದೆಳೆದಿವೆ.

ಬಿ.ಎಂ. ಶ್ರೀಕಂಠಯ್ಯನವರು ಬರೆದ 'ಮೈಸೂರು ಮಕ್ಕಳು' ಪ್ರಸಿದ್ಧ ಕನ್ನಡ ಕವಿತೆ.

**ನಿಮ್ಮ ನಾಡಾವುದು?**

**ಮೈಸೂರು.**
**ನಿಮ್ಮೂರದಾವುದು?**
**ಮೈಸೂರು**

**(ಮೈಸೂರು ಮಕ್ಕಳು, ಬಿ.ಎಂ.ಶ್ರೀಕಂಠಯ್ಯ)**

ಕನ್ನಡದ ಬಗೆಗಿನ ಕಾಳಜಿ, ಮೈಸೂರಿನ ಬಗೆಗಿನ ಪ್ರೀತಿ, ಮೈಸೂರು ದೊರೆಗಳ ಶ್ರೀಮಂತ ಪರಂಪರೆ, ನಾಡು ನುಡಿಗೆ ಅವರ ಕೊಡುಗೆ ಎಲ್ಲವನ್ನು ನಾಡಿನ ಜನತೆ ಅತ್ಯಂತ ಗೌರವದಿಂದ ಕಂಡಿದೆ. ಅದರ ಧ್ಯೋತಕವಾಗಿ ಈ ಬಗೆಯ ಕವನಗಳು ರಚನೆಯಾಗಿದೆ.

ಆನಂದಕಂದರು ಬರೆದ 'ಕನ್ನಡ ನುಡಿ' ಪದ್ಯದಲ್ಲಿ ಅವರು

**ಎನಿತು ಇನಿದು ಈ ಕನ್ನಡ ನುಡಿಯು**
**ಮನವು ತಣಿಸುವ ಮೋಹನ ಸುಧೆಯು**

**(ಕನ್ನಡ ನುಡಿ, ಆನಂದಕಂದ)**

ಕನ್ನಡ ಭಾಷೆಯ ಸುಮಧುರತೆಯನ್ನು ಈ ಪದಗಳು ಧ್ವನಿಸುತ್ತವೆ. ಜೆ.ಪಿ. ರಾಜರತ್ನಂ ಅವರ 'ಕನ್ನಡ ಪದಗೊಳು' ಕವನ ಕನ್ನಡಿಗರಿಗೆ ಅತ್ಯಂತ ಚಿರಪ–ರಿಚಿತ. ಅಭಿಮಾನ ಮೆರೆಯುವ ಜೊತೆಗೆ ಕನ್ನಡದ ಬಗೆಗಿನ ಆತಂಕವನ್ನು ಹಾಗೂ ಎಚ್ಚರವನ್ನು ನೀಡಿದ ಹಲವು ಕವಿಗಳಿದ್ದಾರೆ. ಪ್ರಸ್ತುತ ಸಂದರ್ಭದ ಕನ್ನಡದ ಅಸ್ಮಿತೆಗೆ ಇದು ಸವಾಲು.

ತೀ.ನಂ.ಶ್ರೀಕಂಠಯ್ಯ ನವರ 'ಕನ್ನಡಿಗನ ಕೊರಗು' ಇಂಥ ಒಂದು ಕವಿತೆ.

**ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ**
**ನಾವು ಸಮ ನಿಮಗೆಂದು ನುಡಿವ ಬಲವಿಲ್ಲ !**
**ಮಿಕ್ಕವರು ಕಡೆಗಣಿಸಿ ನೂಕಿದಾ ಕಡೆ ಬಿದ್ದು**
**ಯಾವ ಮಂಕೋ ಕವಿದು ಹುಡುಗಿರುವೆವಲ್ಲ**

**(ಕನ್ನಡಿಗನ ಕೂಗು, ತೀ.ನಂ. ಶ್ರೀಕಂಠಯ್ಯ)**

ಕವಿತೆ ನೇರವಾಗಿ ಇತರ ಭಾಷೆಗಳ ಮುಂದೆ ಕನ್ನಡದ ಪ್ರಸ್ತುತ ಸ್ಥಿತಿಯನ್ನು ತಿಳಿಸುತ್ತದೆ. ಆಳುವ ಸರ್ಕಾರಗಳು ಕನ್ನಡ ಕುರಿತಾದ ಅಧಿನಿಯಮ, ನಿಯಮಗಳನ್ನು ಕಟ್ಟು ನಿಟ್ಟಾಗಿ ಅನುಷ್ಠಾನಗೊಳಿಸದಿದ್ದರೆ ಕನ್ನಡದ ಉಳಿವು ಮತ್ತು ಬೆಳವಣಿಗೆಗೆ ಪೂರಕವಾದ ವಾತಾವರಣ ಸೃಷ್ಟಿಯಾಗುವುದಿಲ್ಲ.

ಕವಿರಾಜಮಾರ್ಗದಲ್ಲಿ ಬರುವ 'ಕಾವೇರಿ'ಯ ಉಲ್ಲೇಖ, ಶಬ್ಧಮಣಿದರ್ಪಣದಲ್ಲಿ ಬರುವ 'ಕಾವೇರಿಯ ಕಾಲನ ತಿಗುಳನೇಂ

ಕಡಗೊಂಡನೋ ಬಡ್ಡಿಗೊಂಡನೋ' ಎಂಬ ಮಾತು ಕನ್ನಡ ನಾಡಿನ ಕಾವೇರಿ ನದಿಯ ಉಲ್ಲೇಖವನ್ನು ಹಾಗೂ ಜಲವಿವಾದವನ್ನು ನೆನಪಿಸುತ್ತದೆ. ಕನ್ನಡದ ಬರಹಗಳಲ್ಲಿ ಕಾವೇರಿಯ ಉಲ್ಲೇಖ ಬಹುವಾಗಿ ಬಂದಿದೆ. ಪ್ರತೀ ವರ್ಷ ಪ್ರಾಕೃತಿಕ ವಿಕೋಪಗಳ ಕಾರಣದಿಂದ ಉಂಟಾಗುವ ಬರದ ಸಂದರ್ಭದಲ್ಲಿ ಕನ್ನಡ ನಾಡಿನ ಕೃಷಿಕ ಸಮೂಹ ನದಿ ನೀರನ್ನು ನೆರೆ ರಾಜ್ಯಕ್ಕೆ ಹಾಯಿಸುವುದರ ವಿರುದ್ಧ ಆಕ್ರೋಶ ವ್ಯಕ್ತಪಡಿಸುವ ಪರಿಸ್ಥಿತಿಗೆ ಇಳಿಯಬೇಕಾಗಿರುವುದು ಶೋಚನೀಯ.

ಕಾವೇರಿ ನದಿ ಮಂಡ್ಯ, ಮೈಸೂರು, ಬೆಂಗಳೂರು ನಗರಗಳಿಗೆ ಮೀಸಲು ಎಂಬ ಭಾವನೆ ಇದೆ. ಕೃಷ್ಣ, ತುಂಗೆ, ಮಹಾದಾಯಿ, ಮಹಾನದಿಗಳ ವಿವಾದ ಉಂಟಾದಾಗ ಆಯಾ ಭಾಗದ ರೈತರು ಮಾತ್ರ ಧ್ವನಿ ಎತ್ತುವ ಪರಿಸ್ಥಿತಿ ಕಂಡು ಬರುತ್ತದೆ. ಇದು ಕನ್ನಡಿಗರಲ್ಲಿ ಒಗ್ಗಟ್ಟಿನ ಕೊರತೆ ಇರುವುದನ್ನು ಎತ್ತಿ ತೋರುತ್ತದೆ.

ಕನ್ನಡಿಗರಲ್ಲಿ ಅಭಿಮಾನದ ಕೊರತೆಯಿಲ್ಲ, ಒಗ್ಗಟ್ಟಿನ ಕೊರತೆ ಇದೆ. ಸೂಕ್ತ ನಾಯಕತ್ವದ ಕೊರತೆ ಇದೆ. ಹತ್ತಾರು ಸಮಿತಿ, ಪಡೆಗಳು ಸ್ಥಾಪನೆ ಆಗಿವೆ. ಇಂತಹ ಹಲವಾರು ಸಮಿತಿಗಳಿಂದಾಗಿ ಒಗ್ಗಟ್ಟಿನ ಬದಲಾಗಿ ಒಡಕಗಳು ಉಂಟಾಗಿವೆ. ಅದ–ರಿಂದಾಗಿ, ಕನ್ನಡಿಗರಿಗೆ ನಷ್ಟವೇ ಆಗಿದೆ. ಕನ್ನಡ ನಾಡಿನ ವಿಚಾರವಂತೂ ಇಂದು ಚರ್ಚೆಗೆ ಮಾಡಬೇಕಾದ ವಿಚಾರವಾಗಿದೆ. ನಾವೆಲ್ಲರೂ ಕನ್ನಡಿಗರೆಂಬ ವಿಶಾಲ ದೃಷ್ಟಿಕೋನ ಕೇಳಿ ಬಂದರೂ ನಮ್ಮಲ್ಲಿ ಏಕತೆಯಿಲ್ಲ. ನಮ್ಮನ್ನು ನಾವು ಪ್ರದೇಶಗಳ, ಜಾತಿ, ಮತಗಳ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳುವ ಮಟ್ಟಕ್ಕೆ ಇಳಿದಿದ್ದೇವೆ. ಭಾಷಾವಾರು ಪ್ರಾಂತ ವಿಂಗಡಣೆಯ ಹೆಸರಿನಲ್ಲಿ ಕನ್ನಡ ನಾಡು ಕನ್ನಡದ ಪ್ರದೇಶಗಳನ್ನು ಕಳೆದುಕೊಂಡಿದೆ. ಸರ್ಕಾರದ ಸೌಲಭ್ಯಗಳು ಎಲ್ಲರಿಗೂ ಸಮನಾಗಿ ದೊರೆಯುತ್ತಿಲ್ಲ. ರಾಜಕೀಯದ ಕೆಸರೆರೆಚಾಟಕ್ಕೆ ನಾವು ಪಾಲುದಾರರಾಗಿದ್ದೇವೆ. ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ, ಕಲಬುರ್ಗಿ ಕನ್ನಡ ಎಂಬ ಭಿನ್ನತೆಗಳಿವೆ. ಕುಂದಾಪುರ ಕನ್ನಡ ಈ ಬಗೆಯ ವರ್ಗೀಕರಣಕ್ಕೆ ಹೊಸ ಸೇರ್ಪಡೆ. ಇದು ತಮ್ಮ ಉಪ ಭಾಷೆಯ ಅಸ್ಮಿತೆಗೆ ಪೂರಕವಾದರೂ ಸಹ ಅಖಂಡ ಕರ್ನಾಟಕ ಹಾಗೂ ಕನ್ನಡದ ಅಸ್ಮಿತೆಗೆ ಸವಾಲಾಗಲಿದೆ.

ಕನ್ನಡ ಸಾಹಿತ್ಯ ಸಮಾವೇಶಗಳು ರಾಜಕೀಯದಿಂದ ಹೊರತಾಗಿಲ್ಲ. ಇಂತಹ ಯೋಜನೆ, ಆಲೋಚನೆ, ಭಿನ್ನತೆ, ವೈರುಧ್ಯತೆ ಕನ್ನಡ ನಾಡಿನ ಸೊಗಸು ಹೌದು ಹಾಗೂ ಇದು ಕನ್ನಡದ ಅಸ್ಮಿತೆಗೆ ಒದಗಿರುವ ಸವಾಲು ಹೌದು. ಕರ್ನಾಟಕದ ಗಡಿಭಾಗಗಳಲ್ಲಂತೂ ಪರಭಾಷೆ ಸಂಪೂರ್ಣವಾಗಿ ಆಕ್ರಮಿಸಿಕೊಂಡಿದೆ.

"ಹರಿದು ತುಂಡಾಗಿಹುದು ಇಂದು ಕನ್ನಡ ನಾಡು" ಎಂಬ ಮಾಸ್ತಿ ಅವರ

ನುಡಿ ಕನ್ನಡಿಗರಿಗೆ ನೀಡಿದ ಎಚ್ಚರಿಕೆ ಹಾಗೂ ತಿಳಿವಳಿಕೆ, ಅವರು ಹೇಳಿದಂತೆ "ಕನ್ನಡ ನಾಡ ಜನವೆಲ್ಲವೂ ನನ್ನವರು" ಎನ್ನುವ ವಿಶಾಲ ಭಾವ ಮೂಡಬೇಕಿದೆ.

ಪ್ರಕೃತಿ ಹಾಗೂ ನಗರಗಳ ವೈವಿಧ್ಯತೆ ಸಹ ಕನ್ನಡದ ಕವಿಗಳಲ್ಲಿ ಅಕ್ಷರದ ರೂಪ ಪಡೆದಿದೆ. ಲಾಲ್ ಬಾಗ್ ಉದ್ಯಾನವನ, ಕಬ್ಬನ್ ಪಾರ್ಕ್, ಕುಕ್ಕರಹಳ್ಳಿ ಕೆರೆಯು ಸಹ ಕವಿಯ ಮೂಲಕ ಕವಿತೆಯಾಗಿ ಮೂಡಿಬಂದಿದೆ. ಕೋಗಿಲೆ, ಶ್ರೀಗಂಧ ಮರ, ಮೈಸೂರು ಮಲ್ಲಿಗೆ, ಮಡಿಕೇರಿಯ ಮಂಜು, ಹುತ್ತರಿ ಹಾಡು, ಹೈದರಾಬಾದ್ ಎಂಬ ಕವಿತೆಗಳು ಓದಲೇಬೇಕಾದ ಕನ್ನಡದ ಕವಿತೆಗಳಾಗಿವೆ.

ತೆಂಕಣ ಗಾಳಿಯಾಟ, ಕಾರ್ಗಾಲದ ವೈಭವ, ನಾಡಿನ ನಾಡು, ಅರುಣೋದಯ ಮೊದಲಾದ ಕವಿತೆಗಳು ಕನ್ನಡ ನಾಡಿನ ವೈಭವ ಮತ್ತು ಪ್ರಕೃತಿಯ ರಮ್ಯ ಚಿತ್ರಣವನ್ನು ಮನದಣಿಯೆ ವರ್ಣಿಸಿವೆ.

ಬದಲಾದ ಸಂದರ್ಭದಲ್ಲಿ, ನಾಗರಿಕತೆಯ ಪಲ್ಲಟ, ನಗರೀಕರಣ, ಆಧುನೀಕರಣಗಳ ಹೆಸರಿನಲ್ಲಿ ನಾಡು, ನುಡಿ, ಜಲ ಎಲ್ಲವೂ ಭಿನ್ನವಾದ ಆಲೋಚನಾ ಕ್ರಮಕ್ಕೆ ವಸ್ತುವಾಗಿದೆ. ಕನ್ನಡಿಗರಾದ ನಾವು ಕನ್ನಡದ ಅಸ್ಮಿತೆಗಾಗಿ ಶ್ರಮಿಸಬೇಕಿದೆ. ಈ ಹಿನ್ನೆಲೆಯಲ್ಲಿ ನಮ್ಮಗಳ ಪಾತ್ರ ದೊಡ್ಡದು.

**ಪರಾಮರ್ಶನ ಗ್ರಂಥಗಳು:**

1. ಕೇಶವ ಮೂರ್ತಿ ಎಚ್. ಎಲ್. (2007). ಕಾವೇರಿ ತೀರ್ಪು ಅನ್ಯಾಯ ಎಲ್ಲಿ. ಅಭಿರುಚಿ ಪ್ರಕಾಶನ. ಮೈಸೂರು.
2. ಅಭಿರುಚಿ ಗಣೇಶ್ (ಸಂ). (2012). ಅಖಂಡ ಕರ್ನಾಟಕದ ಕೋ.ಚೆ. ಅಭಿರುಚಿ ಪ್ರಕಾಶನ. ಮೈಸೂರು.
3. ಸಿದ್ಧರಾಮಯ್ಯ ಎಸ್. ಜಿ. (2019). ಕನ್ನಡ ಭಾಷೆ–ಬದುಕು. ನವ ಕರ್ನಾಟಕ ಪ್ರಕಾಶನ. ಬೆಂಗಳೂರು.
4. ಕನ್ನಡದ ಭಾವುಟ. (1979). ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
5. ಜಯಕುಮಾರ್ ಅನಗೋಳ್. (2011). ಕಡ್ಡಾಯದ ಪ್ರಾಥಮಿಕ ಶಿಕ್ಷಣ. ನವ ಕರ್ನಾಟಕ ಪ್ರಕಾಶನ. ಬೆಂಗಳೂರು.